Teachingninja.in

Latest Govt Job updates

Private Job updates

Free Mock tests available

Visit - teachingninja.in

# KPSC Probationers

## Previous Year Paper
## (Kannada)
## 2021

Teachingninja.in

**2021**

**Kannada**

**ಕನ್ನಡ**

| | |
|---|---|
| ಸಮಯ : 2 ಗಂಟೆಗಳು | ಗರಿಷ್ಠ ಅಂಕಗಳು : 150 |
| Time : 2 Hours | Maximum Marks : 150 |

## SPECIFIC INSTRUCTIONS

**ನಿರ್ದಿಷ್ಟ ಸೂಚನೆಗಳು**

*(i)* Candidates have to attempt all questions.

ಅಭ್ಯರ್ಥಿಗಳು ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಬೇಕು

*(ii)* Marks carried by each question are indicated at its end.

ಪ್ರತಿ ಪ್ರಶ್ನೆಯ ಕೊನೆಯಲ್ಲಿ ಅದಕ್ಕೆ ನೀಡಲಾಗುವ ಅಂಕಗಳನ್ನು ನಮೂದಿಸಲಾಗಿದೆ.

### SECTION—A / ವಿಭಾಗ—A

**1.** ಈ ಕೆಳಗಿನ ವಿಷಯವನ್ನು ಕುರಿತು 350 ಪದಗಳಿಗೆ ಮೀರದಂತೆ ಪ್ರಬಂಧ ರಚಿಸಿ. **[25]**

ಇಂಗ್ಲೀಷ್ ಮಾಧ್ಯಮದ ಸರ್ಕಾರಿ ಶಾಲೆಗಳು

**2.** ಈ ಕೆಳಗಿನ ಗದ್ಯಭಾಗವನ್ನು ಗಮನವಿಟ್ಟು ಓದಿ ಕೊನೆಯಲ್ಲಿ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

ಕರ್ನಾಟಕವು ಖನಿಜ ಸಂಪತ್ತುಗಳ ತವರೂರು. ಕ್ರಿ.ಪೂ. 2500ರ ವೇಳೆಗಾಗಲೇ ಕರ್ನಾಟಕದ ಕೋಲಾರದ ಚಿನ್ನವು ಸಿಂಧೂ ನದಿಯ ಬಯಲಿನ ನಾಗರಿಕತೆಯ ಜನರನ್ನು ತಲುಪಿತ್ತು ಎಂದು ತಿಳಿದುಬರುತ್ತದೆ. ಒಂದು ಕಾಲಕ್ಕೆ ಚಿನ್ನದ ಉತ್ಪಾದನೆಗೆ ವಿಶೇಷ ಹೆಸರಾಗಿದ್ದ ಕೋಲಾರದ ಚಿನ್ನದ ಗಣಿಯ ನಿಕ್ಷೇಪ ಇಂದು ಕಡಿಮೆಯಾಗುತ್ತಿದೆ. ಬದಲಿಗೆ ರಾಯಚೂರು ಜಿಲ್ಲೆಯ ಹಟ್ಟಿ ಚಿನ್ನದ ಗಣಿಯು ಮಹತ್ವ ಪಡೆಯುತ್ತಿದೆ.



Teachingninja.in

ಕಲಬುರಗಿ ಜಿಲ್ಲೆಯಲ್ಲೂ ಚಿನ್ನದ ನಿಕ್ಷೇಪವನ್ನು ಪತ್ತೆ ಹಚ್ಚಲಾಗಿದೆ. ಹೀಗೆ ಚಿನ್ನದ ಉತ್ಪಾದನೆಗೆ ಕರ್ನಾಟಕ ಹೆಸರುವಾಸಿಯಾಗಿದೆ. ಹೀಗೆಯೇ ಕರ್ನಾಟಕದಲ್ಲಿ ಕಬ್ಬಿಣದ ಅದಿರಿನ ನಿಕ್ಷೇಪದ ಪ್ರಮಾಣವು ಹೆಚ್ಚಾಗಿಯೇ ಇದೆ. ಹೊಸಪೇಟೆ, ಸಂಡೂರು–ಬಳ್ಳಾರಿಯಲ್ಲಿ ಉತ್ತಮ ಗುಣಮಟ್ಟದ ಕಬ್ಬಿಣದ ಅದಿರಿನ ತಾಣಗಳು ಕಂಡುಬರುತ್ತವೆ. ಚಿಕ್ಕಮಗಳೂರು ಜಿಲ್ಲೆಯ ಕುದುರೆಮುಖದ ಕಬ್ಬಿಣದ ಅದಿರು ಈಗಾಗಲೇ ಅಧಿಕ ಬೇಡಿಕೆ ಹೊಂದಿದೆ. 1920ರಲ್ಲಿ ಸ್ಥಾಪಿತವಾದ ಭದ್ರಾವತಿಯ ಕಬ್ಬಿಣದ ಕಾರ್ಖಾನೆಯು ವಿಶ್ವೇಶ್ವರಯ್ಯ ಐರನ್ ಅಂಡ್ ಸ್ಟೀಲ್ಸ್ ಎಂಬ ಹೆಸರಿನಲ್ಲಿ ಕಾರ್ಯನಿರ್ವಹಿಸುತ್ತಿದೆ. ಹೀಗೆ ಕಬ್ಬಿಣದ ತಯಾರಿಕೆಯಲ್ಲಿ ಕರ್ನಾಟಕವು ಮುಂಚೂಣಿಯಲ್ಲಿದೆ.

ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆಗಳು ಮ್ಯಾಂಗನೀಸ್ ಉತ್ಪಾದನೆಗೆ ಹೆಸರು ಗಳಿಸಿವೆ. ಅಲ್ಯುಮಿನಿಯಂ ಉತ್ಪಾದನೆಗೆ ಬೇಕಾದ ಬಾಕ್ಸೈಟ್ ಕರ್ನಾಟಕದ ಉತ್ತರ ಮತ್ತು ಕರಾವಳಿ ಪ್ರದೇಶದಲ್ಲಿ ದೊರೆಯುತ್ತದೆ. ಇದಲ್ಲದೆ ಪಿಂಗಾಣಿ ಸಾಮಾನುಗಳ ತಯಾರಿಕೆಗೆ ಬೇಕಾದ ಜೇಡಿಮಣ್ಣು, ಸಿಮೆಂಟ್ ತಯಾರಿಕೆಗೆ ಬೇಕಾದ ಸುಣ್ಣದಕಲ್ಲು ಮುಂತಾದವುಗಳಿಗೆ ಕೊರತೆಯಿಲ್ಲ. ಕರ್ನಾಟಕದಲ್ಲಿ ಈಗ ಭಾರಿ ಪ್ರಮಾಣದ ಮತ್ತು ಸಣ್ಣ ಪ್ರಮಾಣದ ಸಿಮೆಂಟ್ ಕೈಗಾರಿಕೆಗಳು ಯಶಸ್ಸು ಪಡೆದಿವೆ. ಕಲಬುರಗಿ, ರಾಯಚೂರು, ತುಮಕೂರು, ಬಿಜಾಪುರ ಜಿಲ್ಲೆಗಳು ಸಿಮೆಂಟ್ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿದೆ.

ಕರ್ನಾಟಕ ಸರ್ಕಾರವು ಗ್ರಾಮೀಣ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡುವ ಸಲುವಾಗಿ 1983ರಲ್ಲಿ ಕೈಗಾರಿಕಾ ನೀತಿಯೊಂದನ್ನು ಜಾರಿಗೆ ತಂದಿದೆ. ಕೈಗಾರಿಕಾ ಕ್ಷೇತ್ರ ಅಭಿವೃದ್ಧಿ ಮಂಡಳಿಯು ರಾಜ್ಯದ ಪ್ರಮುಖ ಸ್ಥಳಗಳಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಸ್ಥಳಾವಕಾಶ ಮತ್ತು ಕಟ್ಟಡಗಳ ಸೌಲಭ್ಯವನ್ನು ಕಲ್ಪಿಸಿದೆ. ಸಣ್ಣ ಪ್ರಮಾಣದ ಕೈಗಾರಿಕೆಗಳ ಬಗೆಗೂ ಆಸಕ್ತಿ ವಹಿಸುತ್ತಿರುವ ಸರ್ಕಾರವು ಎಲೆಕ್ಟ್ರಾನಿಕ್ಸ್, ರೇಷ್ಮೆ, ಚರ್ಮ, ಕೈಮಗ್ಗ, ಕರಕುಶಲಕಲೆ, ಖಾದಿ, ಸಕ್ಕರೆ, ಬೀಡಿ ಮುಂತಾದ ಕೈಗಾರಿಕೆಗಳ ಬೆಳವಣಿಗೆಗೆ ಪ್ರಾಶಸ್ತ್ಯ ನೀಡಿದೆ. ಈಚಿನ ದಿನಗಳಲ್ಲಿ ಬೆಂಗಳೂರು ಎಲೆಕ್ಟ್ರಾನಿಕ್ ಉದ್ಯಮಿಗಳನ್ನು ಹೆಚ್ಚಾಗಿ ಆಕರ್ಷಿಸುತ್ತಿದೆ. ಬಂಡವಾಳ ಹೂಡಿಕೆಗೆ ಸಹಾಯಧನ, ಅವಶ್ಯಕ ತರಬೇತಿ, ಹಲವು ರಿಯಾಯಿತಿಗಳ ಮೂಲಕ ಸರ್ಕಾರವು ಕೈಗಾರಿಕಾ ಪ್ರಗತಿಗೆ ನೆರವಾಗುತ್ತಿದೆ. ಬಹುತೇಕ ಉದ್ಯಮಗಳು ಬೆಂಗಳೂರು ನಗರ ಮತ್ತು ಅದರ ಆಸುಪಾಸಿನಲ್ಲಿ ಕೇಂದ್ರೀಕೃತವಾಗಿರುವುದರಿಂದ ಬೆಂಗಳೂರು ಪರಿಸರ ಕೆಡುತ್ತಿದೆ ಮತ್ತು ಜನಸಂಖ್ಯೆಯ ಒತ್ತಡ ಹೆಚ್ಚಾಗುತ್ತಿದೆ. ಆದ್ದರಿಂದ ಬೇರೆ ಬೇರೆ ಜಿಲ್ಲೆಗಳಿಗೆ ಉದ್ಯಮಗಳನ್ನು ಸ್ಥಳಾಂತರಿಸುವುದು ಉತ್ತಮ.

ಒಂದು ಕಾಲಕ್ಕೆ ವಿದ್ಯುತ್ ಉತ್ಪಾದನೆಗೆ ಹೆಸರಾಗಿದ್ದ ಕರ್ನಾಟಕವು ಈಗ ತನ್ನ ಅವಶ್ಯಕತೆಗಳಿಗೆ ಪರದಾಡುವ ಪರಿಸ್ಥಿತಿ ಬಂದಿದೆ. ಪ್ರತಿವರ್ಷವು ಹೆಚ್ಚುತ್ತಿರುವ ಬೇಡಿಕೆಗೆ ತಕ್ಕಂತೆ ವಿದ್ಯುತ್ ಉತ್ಪಾದನೆಯಾಗುತ್ತಿಲ್ಲ. ಈಗಾಗಲೇ ಚಾಲ್ತಿಯಲ್ಲಿರುವ 22 ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ 14087 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದನೆಯಾಗುತ್ತಿದೆ. ಇನ್ನು ಕಾಳಿ ಮತ್ತು ವರಾಹಿ ಜನ ವಿದ್ಯುತ್ ಘಟಕಗಳು ಕಾರ್ಯಾರಂಭ ಮಾಡಬೇಕಿದೆ. ಕಲ್ಮಲ, ಗಣೇಕಲ್, ಸಿರವಾರ, ಮಲ್ಲಾಪುರ ಇತ್ಯಾದಿ ಕಿರು ಜಲವಿದ್ಯುತ್ ಯೋಜನೆಗಳ ಕಾರ್ಯವು ನಡೆಯುತ್ತಿದೆ. ವಿದ್ಯುತ್ ಬೇಡಿಕೆಗಳನ್ನು ಸರಿದೂಗಿಸಲು ಸಾಧ್ಯವಾಗದಿರುವ ಕಾರಣ ಶಾಖೋತ್ಪನ್ನ ವಿದ್ಯುತ್ ಕೇಂದ್ರಗಳು, ಡೀಸೆಲ್ ಉತ್ಪಾದನಾ ಕೇಂದ್ರಗಳು ಮತ್ತು ಅಣು ವಿದ್ಯುತ್ ಉತ್ಪಾದನಾ ಕೇಂದ್ರಗಳು ಕರ್ನಾಟಕಕ್ಕೆ ಅನಿವಾರ್ಯವಾಗಿದೆ. ರಾಯಚೂರಿನಲ್ಲಿ ಈಗಾಗಲೇ ಸ್ಥಾಪಿತವಾಗಿರುವ ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಕೇಂದ್ರದ ಎರಡು ಘಟಕಗಳು ಕಾರ್ಯನಿರ್ವಹಿಸುತ್ತಿವೆ. ಯಲಹಂಕದ ಬಳಿಯಿರುವ ಡೀಸೆಲ್ ಉತ್ಪಾದನಾ ಕೇಂದ್ರ, ವಿಜಯನಗರ ಶಾಖೋತ್ಪನ್ನ ಕೇಂದ್ರ, ದಕ್ಷಿಣ ಕನ್ನಡ ಜಿಲ್ಲೆಯ ನಂದಿಕೂರಿನ ಬಳಿಯಿರುವ ಶಾಖೋತ್ಪನ್ನ ಕೇಂದ್ರ, ಕೈಗಾದ ಬಳಿಯಿರುವ ಅಣುವಿದ್ಯುತ್ ಉತ್ಪಾದನಾ ಕೇಂದ್ರಗಳು ಕಾರ್ಯನಿರ್ವಹಿಸಲು ಸಿದ್ಧವಾಗುತ್ತಿವೆ. ಉತ್ಪಾದನೆಯ ತೀವ್ರ ಅವಶ್ಯಕತೆಯನ್ನು ಗಮನಿಸಿ ಸರ್ಕಾರವು ಹಲವು ಖಾಸಗಿ ಕಂಪನಿಗಳಿಗೆ ವಿದ್ಯುತ್ ಉತ್ಪಾದನೆಯ ಜವಾಬ್ದಾರಿಯನ್ನು ವಹಿಸಲು ಮುಂದಾಗುತ್ತಿರುವುದು ಆಶಾದಾಯಕ ಬೆಳವಣಿಗೆಯಾಗಿದೆ.



Teachingninja.in

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ: **[5×5=25]**

*(a)* ಕರ್ನಾಟಕದಲ್ಲಿ ಕಂಡುಬರುವ ಚಿನ್ನ ಮತ್ತು ಕಬ್ಬಿಣದ ನಿಕ್ಷೇಪಗಳನ್ನು ಕುರಿತು ವಿವರಿಸಿ.

*(b)* ಮ್ಯಾಂಗನೀಸ್ ಮತ್ತು ಬಾಕ್ಸೈಟ್ ದೊರೆಯುವ ಸ್ಥಳಗಳಾವುವು? ಪಿಂಗಾಣಿ ಸಾಮಾನು ಮತ್ತುಸಿಮೆಂಟನ್ನು ಯಾವುದರಿಂದ ಮತ್ತು ಯಾವ ಜಿಲ್ಲೆಯಲ್ಲಿ ತಯಾರಿಸಲಾಗುತ್ತದೆ?

*(c)* ಕರ್ನಾಟಕ ಸರ್ಕಾರವು ಗ್ರಾಮೀಣ ಭಾಗದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಹೇಗೆ ಪ್ರೋತ್ಸಾಹ ನೀಡಿದೆ? ವಿವರಿಸಿ.

*(d)* ಈಚಿನ ದಿನಗಳಲ್ಲಿ ಬೆಂಗಳೂರು ಯಾವ ಉದ್ಯಮಿಗಳನ್ನು ಹೆಚ್ಚು ಆಕರ್ಷಿಸುತ್ತಿದೆ? ಬೆಂಗಳೂರಲ್ಲಿ ಹೆಚ್ಚು ಕೈಗಾರಿಕೆಗಳನ್ನು ಸ್ಥಾಪಿಸಿರುವುದರಿಂದ ಉಂಟಾಗಿರುವ ಪರಿಣಾಮವನ್ನು ಕುರಿತು ವಿವರಿಸಿ.

*(e)* ವಿದ್ಯುತ್ ಉತ್ಪಾದನೆಯ ವಿಧಾನಗಳಾವುವು? ವಿವರಿಸಿ.

**3. ಸಂಕ್ಷಿಪ್ತ ಲೇಖನ / (Precis Writing)** **[25]**

**ಸುಮಾರು 100 ಶಬ್ದಗಳಿಗೆ ಮೀರದಂತೆ ಈ ಕೆಳಗಿನ ಗದ್ಯಭಾಗದ ಸಾರವನ್ನು ನಿಮ್ಮ ಸ್ವಂತ ಮಾತುಗಳಲ್ಲಿ ಬರೆಯಿರಿ ಹಾಗೂ ಸೂಕ್ತ ಶೀರ್ಷಿಕೆ ನೀಡಿ.**

ಭಾರತೀಯ ಸಂಪ್ರದಾಯದಲ್ಲಿ ಗುರುವಿಗೆ ಪರಮೋಚ್ಚ ಸ್ಥಾನವನ್ನು ಕಲ್ಪಿಸಲಾಗಿದೆ. ಗುರುವೇ ಬ್ರಹ್ಮ, ಗುರುವೇ ವಿಷ್ಣು ಮತ್ತು ಗುರುವೇ ಸಾಕ್ಷಾತ್ ಶಿವನೆಂದು ಬಣ್ಣಿಸಲಾಗಿದೆ. ಗುರುವು ಜ್ಞಾನ ಜಗತ್ತಿನ ಪಾಲಕನಾಗಿದ್ದಾನೆ. ಜ್ಞಾನದ ಹಸಿವನ್ನು ಹಿಂಗಿಸುತ್ತಾನೆ. ಅವನು ಶಿಷ್ಯರಿಗೆ ಜ್ಞಾನ, ಅನುಭವ, ಮಾಹಿತಿ ಒದಗಿಸುವ ಮೂಲಕ ಅವರ ಅಭ್ಯುದಯಕ್ಕೆ ಕಾರಣನಾಗುತ್ತಾನೆ. ಗುರುವಾದವನು ಶಿಷ್ಯರಲ್ಲಿ ಹುದುಗಿರುವ ಕೆಟ್ಟ ಗುಣಗಳನ್ನು ನಾಶ ಮಾಡಿ ಸತ್ಯ, ಅಹಿಂಸೆ ಹಾಗೂ ಜೀವನ ಮೌಲ್ಯಗಳನ್ನು ಬೆಳೆಸಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಶಿಷ್ಯನಲ್ಲಿ ಕವಿದಿರುವ ಅಜ್ಞಾನವೆಂಬ ಕತ್ತಲನ್ನು ಲಯ ಮಾಡಬೇಕು.

ಗುರುವು ಎಂದಿಗೂ ತನ್ನ ಗುರಿಯಿಂದ ವಿಮುಖನಾಗಬಾರದು. ಎಂತಹ ಕಷ್ಟಗಳು ಎದುರಾದರೂ ಅವನು ಸತ್ಯ ಮಾರ್ಗವನ್ನು ಬಿಡಬಾರದು. ಭಾರತೀಯ ಶಿಕ್ಷಣ ವ್ಯವಸ್ಥೆಯು ಈ ಕಾರಣದಿಂದಾಗಿಯೇ ಜಗತ್ತಿನ ಅನೇಕ ತತ್ವಜ್ಞಾನಿಗಳ ಪ್ರಶಂಸೆಗೆ ಪಾತ್ರವಾಗಿದೆ. ಜರ್ಮನಿಯ ತತ್ವಜ್ಞಾನಿ ಮ್ಯಾಕ್ಸ್‌ಮುಲ್ಲರ್ ಅನೇಕ ವರ್ಷಗಳ ಕಾಲ ಅಧ್ಯಯನ ನಡೆಸಿ ಕೊನೆಗೆ ಹೀಗೆ ತೀರ್ಮಾನಕ್ಕೆ ಬರುತ್ತಾನೆ. "ಈ ಆಕಾಶದ ಛತ್ರದಡಿಯಲ್ಲಿ ಮಾನವನ ಆದಿ ಹಾಗೂ ಅಂತ್ಯದ ಸಮಸ್ಯೆಗಳ ಬಗ್ಗೆ ಪರಿಪೂರ್ಣವಾದ ಮತ್ತು ನಿಖರವಾದ ಪರಿಹಾರವನ್ನು ಎಲ್ಲಾದರೂ ಕಂಡುಕೊಂಡಿದ್ದರೆ ಅದು ಭಾರತದಲ್ಲಿ ಮಾತ್ರ".

ಶಿಕ್ಷಕ ಇಂದಿನ ಶಿಕ್ಷಣದ ಕೇಂದ್ರ ಬಿಂದು. ನಮ್ಮ ಪರಂಪರೆಯಲ್ಲಿ ಶಿಕ್ಷಕನನ್ನು ಸಸ್ಯಗಳನ್ನು ಪೋಷಿಸುವ ತೋಟದ ಮಾಲಿ, ಮಡಿಕೆ ಮಾಡುವ ಕುಂಬಾರ, ಸುಂದರ ವಿಗ್ರಹ ಮಾಡುವ ಶಿಲ್ಪಿ – ಎಂದೆಲ್ಲಾ ಹೋಲಿಸಲಾಗಿದೆ. ತೋಟದ ಮಾಲಿಯು ಸಸ್ಯಗಳಿಗೆ ನೀರೆರೆದು, ಕಸ ತೆಗೆದು ಅವುಗಳ ಬೆಳವಣಿಗೆಗೆ ಹೇಗೆ ಸಹಕರಿಸುವನೋ, ಹಾಗೆಯೇ ಶಿಕ್ಷಕನು ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ಬೇಕಾದ ಎಲ್ಲಾ ಅಂಶಗಳನ್ನು ಧಾರೆಯೆರೆದು ಅವರನ್ನು ಸ್ವಾವಲಂಬಿಗಳನ್ನಾಗಿ, ವಿಚಾರವಂತರನ್ನಾಗಿ ಮಾಡುತ್ತಾನೆ. ಕುಂಬಾರನು ಮಣ್ಣನ್ನು ಹದಗೊಳಿಸಿ ಹೇಗೆ ಮಡಿಕೆಗಳನ್ನು ಮಾಡುವನೋ ಹಾಗೆಯೇ ಶಿಕ್ಷಕನು ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ಸುಂದರವಾಗಿ ರೂಪುಗೊಳಿಸುತ್ತಾನೆ. ಶಿಲ್ಪಿಯು ಕಲ್ಲನ್ನು ಕಡೆದು ಸುಂದರ ಹಾಗೂ ಆಕರ್ಷಕ ವಿಗ್ರಹಗಳನ್ನು ಮಾಡುವ ರೀತಿಯಲ್ಲಿಯೇ ಶಿಕ್ಷಕನು ವಿದ್ಯಾರ್ಥಿಗಳನ್ನು ಶ್ರೇಷ್ಠ ವ್ಯಕ್ತಿಗಳನ್ನಾಗಿ ತಯಾರು ಮಾಡುತ್ತಾನೆ. ಆದ್ದರಿಂದ ನಮ್ಮ ಸಮಾಜದಲ್ಲಿ ಶಿಕ್ಷಕನಿಗೆ ಗೌರವದ ಸ್ಥಾನವನ್ನು ನೀಡಲಾಗಿದೆ.



Teachingninja.in

**4.** ಈ ಕೆಳಗಿನ ಗದ್ಯಭಾಗವನ್ನು ಕನ್ನಡಕ್ಕೆ ಭಾಷಾಂತರಿಸಿ. **[25]**

The National Emblem of India is the symbol of India's message of peace and goodwill to the world. Our National Emblem is represented by the lion capital with chakra (wheel), flanked by a horse and a bull. It was adopted as the National Emblem as it was the royal insignia of the Mouryan Emperor, Ashoka, of the 3rd century B.C. It is the graphic representation of the Lion Capital that originally graced the top of the Ashoka Stambha or Ashoka Pillar at Sarnath, along with National Motto written below it. The original has been preserved at the Archaelogical Museum at Sarnath near Varanasi in Uttar Pradesh.

The Ashoka Chakra is actually a form of the Buddhist Dharma Chakra. Below the representation of the Lion Capital, the words "Satya Meva Jayate" is written in Devanagri Script, which is also the National Motto of India. The words are a quote from Mundaka Upanishad, the last and the most philosophical of the four Vedas.

Presently, Sarnath is situated in Varanasi, a holy city located at the confluence of the rivers Ganga, Yamuna and Saraswati. Sarnath is one of the four holy spots where Lord Buddha turned the wheel of law according to the Buddhist legends, after enlightenment.

## SECTION—B / ವಿಭಾಗ—B

**5.** ಪತ್ರ ಲೇಖನ/**Letter Writing**

ಈ ಕೆಳಗಿನ ವಿಷಯವನ್ನು ಕುರಿತು 100 ಪದಗಳಿಗೆ ಮೀರದಂತೆ ಪತ್ರಿಕಾ ಸಂಪಾದಕರಿಗೆ ಒಂದು ಪತ್ರ ಬರೆಯಿರಿ. **[10]**

ರಕ್ತದಾನ ಮತ್ತು ನೇತ್ರದಾನಗಳ ಮಹತ್ವ

<u>ವಿಶೇಷ ಸೂಚನೆ:–</u>

(ಗೆ, ವಿಳಾಸ–ಸಂಪಾದಕರು, ನವಭಾರತ ಪತ್ರಿಕೆ, ಬೆಂಗಳೂರು ಇವರಿಗೆ ಮತ್ತು

(ಇಂದ ವಿಳಾಸ -**XXX** ಸಂಖ್ಯೆ.1, **yyy** ರಸ್ತೆ, **zzz**-ಸ್ಥಳ)– ಕಾಲ್ಪನಿಕವಾಗಿ ನೀಡಲಾಗಿರುವ ಈ ಮೇಲಿನ ವಿಳಾಸಗಳನ್ನಷ್ಟೇ ಬಳಸಿ ಪತ್ರ ಬರೆಯಲು ಸೂಚಿಸಿದೆ. ಇದರ ಹೊರತಾಗಿ ಬೇರೆ ಯಾವುದೇ ಹೆಸರನ್ನಾಗಲೀ, ವಿಳಾಸವನ್ನಾಗಲೀ, ಸಹಿಯನ್ನಾಗಲೀ ಪತ್ರ ಲೇಖನದಲ್ಲಿ ಬರೆಯಬಾರದು. ಈ ರೀತಿಯ ಯಾವುದೇ ನಮೂದು ಬರೆದಲ್ಲಿ ಪ್ರಶ್ನೆ ಸಹಿತ ಉತ್ತರ ಪುಸ್ತಿಕೆಯನ್ನು ಅಸಿಂಧುವೆಂದು ಪರಿಗಣಿಸಲಾಗುವುದು ಮತ್ತು "ದುರಾಚಾರ ಪ್ರಕರಣ" ಎಂದು ಪರಿಗಣಿಸಿ ಅಭ್ಯರ್ಥಿತ್ವವನ್ನು ರದ್ದುಗೊಳಿಸುವುದಲ್ಲದೇ ಆಯೋಗವು ತೆಗೆದುಕೊಳ್ಳುವ ಶಿಸ್ತು ಕ್ರಮಕ್ಕೆ ಅಭ್ಯರ್ಥಿಯು ಒಳಗಾಗಬೇಕಾಗುತ್ತದೆ.

**6.** ಈ ಕೆಳಗಿನ ಎರಡು ಗಾದೆಗಳಿಗೆ ಅರ್ಥಸ್ವಾರಸ್ಯವನ್ನು ವಿವರಿಸಿ. **[5×2=10]**

*(a)* ಅಕ್ಕಿ ಮೇಲಾಸೆ ನೆಂಟರ ಮೇಲೆ ಪ್ರೀತಿ.

*(b)* ಮಾತು ಆಡಿದರೆ ಹೋಯ್ತು, ಮುತ್ತು ಒಡೆದರೆ ಹೋಯ್ತು.



Teachingninja.in

7. ಈ ಕೆಳಗಿನ ನುಡಿಗಟ್ಟುಗಳಿಗೆ ಅರ್ಥ ವಿವರಿಸಿ. ಅವುಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಪ್ರಯೋಗಿಸಿ. [2×2=4]

(a) ಒಡಕು ಬಾಯಿ

(b) ಬೇರೂರು

8. ಈ ಕೆಳಗಿನವುಗಳಿಗೆ ತತ್ಸಮ ರೂಪಗಳನ್ನು ಬರೆಯಿರಿ. [1×5=5]

(a) ಹರಣ

(b) ಬಸಂತ

(c) ಸಿಂಗಾರ

(d) ಜವ

(e) ಚೌತಿ

9. ಈ ಕೆಳಗಿನವುಗಳಿಗೆ ತದ್ಭವ ರೂಪಗಳನ್ನು ಬರೆಯಿರಿ. [1×5=5]

(a) ಮುಖಶಾಲೆ

(b) ಘಂಟೆ

(c) ಗ್ರಹ

(d) ವಿಜ್ಞಾಪನೆ

(e) ಕ್ಷೌರ

10. ಈ ಕೆಳಗಿನವುಗಳಿಗೆ ವಿರುದ್ಧಾರ್ಥಕ ಪದ ಬರೆಯಿರಿ. [1×6=6]

(a) ಪರಿಗ್ರಹ

(b) ಅಭಾವ

(c) ಸಕ್ರಿಯ

(d) ತಿರಸ್ಕಾರ

(e) ಪುರಾತನ

(f) ವ್ಯಕ್ತ



Teachingninja.in

11. ಈ ಕೆಳಗಿನ ವಾಕ್ಯಗಳಲ್ಲಿ ಕಂಡುಬರುವ ಕಾಗುಣಿತಾಕ್ಷರಗಳ ತಪ್ಪುಗಳನ್ನು ತಿದ್ದಿ ಬರೆಯಿರಿ. [2×5=10]

(a) ಬಾರತೀಯರು ಎಮ್ಮೆಯಿಂದ ಬಿಗುತ್ತಿದ್ದರು.

(b) ನಾವು ಆಚರಿಸುವ ಅಬ್ಬಗಳಲ್ಲಿ ಸಿವರಾತ್ರಿ ಪ್ರಮುಕವಾದದ್ದು.

(c) ಗಾಯಕಿಯು ಶುಂದರವಾದ ಆಡನ್ನು ಹಾದಿದಲು.

(d) ವಿಧ್ಯಾರ್ಥಿಗಳ ಸೈಕ್ಷನಿಕ ಪ್ರವಸಾವು ತುಂಬಾ ಚನ್ನಾಗಿತ್ತು.

(e) ಕರ್ನಾಟಕದಲ್ಲಿ ಕನಿಜ ಸಂಪತ್ತು ಏರಳವಾಗಿದೆ.

* * *



Teachingninja.in